ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ, ಹಳಿಯಾಳ ವಿಭಾಗ, ಹಳಿಯಾಳ-581329
OFFICE OF THE DEPUTY CONSERVATOR OF FORESTS, HALIYAL DIVISION, HALIYAL-581329
ದೂರವಾಣಿ: 08284-220128 ಫ್ಯಾಕ್ಸ: 08284-220365 ಇ-ಮೇಲ್: dcfhaliyal@gmail.com

ಸಂ:ಡಿ1/ಜಿಎಫ್ಎಲ್-/ಡಬ್ಲೂ.ಸಿ.ಪಿ.ಎಂ/2022-23/1546 ದಿನಾಂಕ:08/7/2022

ಇವರಿಗೆ,
ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
(ವನ್ಯಜೀವಿ), ಹಾಗೂ ಮುಖ್ಯ ವನ್ಯಜೀವಿ ಪರಿಪಾಲಕರು,
ಕರ್ನಾಟಕ ಬೆಂಗಳೂರು

ಮಾನ್ಯರೇ,

ವಿಷಯ: NBWL Clearance for the Exiting plant & Expansion plant located at bangur Nagar Dandeli, Haliyal, Uttarkannada, Karnataka by M/s. West Coast Paper Mills Limited (Proposal No.FP/KA/IND/5495/2020 & FP/KA/IND/4837/2020)

ಉಲ್ಲೇಖ:1 ತಮ್ಮ ಕಛೇರಿ ಪತ್ರ ಸಂಖ್ಯೆ.KFD/WL/LAND(LND)/49/2019 ದಿ.11-05-2022.

2 ಈ ಕಛೇರಿಯ ಪತ್ರ ಸಂಖ್ಯೆ, ಜಿಎಫ್ಎಲ್-10/ಡಬ್ಲೂ.ಸಿ.ಪಿ.ಎಂ/2022-23/596 ದಿನಾಂಕ:02/6/2022

3 ಶ್ರೀ ರಾಜೇಂದ್ರ ಜೈನ, Executive Director,WCPM Ltd, ದಾಂಡೇಲಿ ಇವರ ಪತ್ರ ಸಂಖ್ಯೆ,ZZP/PRO/05 ದಿನಾಂಕ:-24-06-2022

-- ❖ --

ಸದರಿ ವಿಷಯಕ್ಕೆ ಕುರಿತಂತೆ ಉಲ್ಲೇಖಿತ ಪತ್ರ (1)ರಲ್ಲಿ ತಾವು ದಾಂಡೇಲಿ ಪಟ್ಟಣದಲ್ಲಿಯ ಪೇಪರ ಮಿಲ್ಲ ನವರು ಪ್ರಸ್ಥಾವನೆ ಸಂಖ್ಯೆ, FP/KA/IND/5495/2020 ಹಾಗೂ FP/KA/IND/4837/ 2020 ರ ಕುರಿತಂತೆ ಕೆಲವು ಮಾಹಿತಿಗಳನ್ನು ಕೇಳಿದ್ದು ಇರುತ್ತದೆ. ಈ ಕಛೇರಿಯಲ್ಲಿ ಕಡತಗಳನ್ನು ಪರಿಶೀಲಿಸಲಾಗಿ ಸದರಿ ವಿಷಯದಲ್ಲಿ ಈ ಪ್ರಸ್ಥಾವನೆಗಳ ಕುರಿತಂತೆ ಈ ಕಛೇರಿಯಿಂದ ಯಾವುದೇ ಪತ್ರ ವ್ಯವಹಾರಗಳು ನಡೆದಿದ್ದು ಇರುವುದಿಲ್ಲ. ಎಲ್ಲ ಪತ್ರವ್ಯವಹಾರಗಳು ಕಾಳಿ ಹುಲಿ ಸಂರಕ್ಷೀತ ಪ್ರದೇಶ, ದಾಂಡೇಲಿಯಿಂದ ನಡೆದಿರುವದಾಗಿರುತ್ತದೆ.

ಅದಾಗ್ಯೂ, ಸದರಿ ವಿಷಯದಲ್ಲಿ ಸೂಕ್ತ ವರದಿಯನ್ನು ದಾಖಲಾತಿಗಳೊಂದಿಗೆ ಒಪ್ಪಿಸುವಂತೆ ಪೇಪರ ಮಿಲ್ಲ, ದಾಂಡೇಲಿ ಇವರನ್ನು ಉಲ್ಲೇಖಿತ ಪತ್ರ (2) ರಲ್ಲಿ ಕೇಳಲಾಗಿತ್ತು, ಅದರಂತೆ Executive Director, WCPM Ltd, ದಾಂಡೇಲಿ ಇವರು ವರದಿಯನ್ನು ಉಲ್ಲೇಖಿತ ಪತ್ರ (3) ರಲ್ಲಿ ಒಪ್ಪಿಸಿರುತ್ತಾರೆ. ಸದರಿ ವರದಿಯನ್ನು ಪರಿಶೀಲಿಸಲಾಗಿದ್ದು ವಿವರಗಳು ಈ ಕೆಳಗಿನಂತಿವೆ.

1. M/s. West Coast Paper Mills Ltd, ದಾಂಡೇಲಿ ಇವರು ದಿನಾಂಕ;12-07-2001 ರಲ್ಲಿ ಸದರಿ ವಿಷಯದಲ್ಲಿ ನಿರಕ್ಷೇಪಣಾ ಪತ್ರವನ್ನು ಪಡೆದುಕೊಂಡಿದ್ದು ಪ್ರತಿಯನ್ನು ಒಪ್ಪಿಸಿರುತ್ತಾರೆ.

2. ಕಂಪನಿಯ ದಿನಾಂಕ:08-12-2006 ರಲ್ಲಿ "Expansion and Modernization of Paper mill" ಕುರಿತಂತೆ ನೀಡಿದ ಪತ್ರಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ವನ್ಯಜೀವಿ ವಿಭಾಗ,ದಾಂಡೇಲಿ ಇವರು ದಿನಾಂಕ:13-04-2007 ರಲ್ಲಿ ವಿವರವಾದ ವರದಿ ಒಪ್ಪಿಸಿದ್ದು ಪ್ರತಿಯನ್ನು ಕಂಪನಿಯವರು ಅನುಬಂಧ-4 ರಲ್ಲಿ ಒಪ್ಪಿಸಿರುತ್ತಾರೆ.ಈ ಬಗ್ಗೆ ಪ್ರಸ್ತಾವನೆಯು ಸರಕಾರಕ್ಕೆ ದಿನಾಂಕ:26-06-2007ರಲ್ಲಿ ತಮ್ಮ ಕಛೇರಿಯಿಂದ ಒಪ್ಪಿಸಲ್ಪಟ್ಟಿದ್ದು ಅನುಬಂಧ-5 ರಲ್ಲಿ ಕಂಪನಿಯು ಒಪ್ಪಿಸಿರುತ್ತಾರೆ.ಅನುಬಂಧ-6 ರಲ್ಲಿಯ ಕೇಂದ್ರ ಸರಕಾರದ ದಿನಾಂಕ:06-12-2006 ರ ಪತ್ರದಲ್ಲಿ ಕೆಲವು ವರದಿಗಳನ್ನು ಹೆಚ್ಚುವರಿಯಾಗಿ ಕೇಳಲಾಗಿರುತ್ತದೆ.

3. ತದನಂತರ ಈ ವಿಷಯದಲ್ಲಿ ಹೆಚ್ಚುವರಿ ಪತ್ರ ವ್ಯವಹಾರಗಳು ನಡೆದಿದ್ದು ಎಲ್ಲ ಪ್ರತಿಗಳನ್ನು ಕಂಪನಿಯವರು ಅನುಬಂಧ-6.2 ರಿಂದ 17 ರವರೆಗೆ ಒಪ್ಪಿಸಿದ್ದು ಎಲ್ಲ ಪ್ರತಿಗಳನ್ನು ತಮ್ಮ ಗೌರವಪೂರ್ವಕ ಅವಗಾಹನೆಗಾಗಿ ಒಪ್ಪಿಸಿದೆ.

ಸದರಿ ವಿಷಯದಲ್ಲಿ ಈ ಹಿಂದೆ ಯಾವುದೇ ಪತ್ರ ವ್ಯವಹಾರವು ಈ ವಿಭಾಗದಿಂದ ಆಗಾದೇ ಇರುವುದರಿಂದ ಪ್ರಸ್ತಾವನೆಯ ಯಾವುದೇ ಮಾಹಿತಿಯು ಈ ಕಛೇರಿಯಲ್ಲಿ ಲಭ್ಯವಿರುವುದಿಲ್ಲ. ಈ ಬಗ್ಗೆ ದಿನಾಂಕ: 06/08/2022 ರಂದು ನಿರ್ದೇಶಕರು ಕಾಳಿ ಹುಲಿ ಸಂರಕ್ಷಿತ ಪ್ರದೇಶರವರೊಂದಿಗೆ ಚರ್ಚಿಸಲಾಗಿ ಸದರಿಯವರು ವಿವರವಾದ ವರದಿಯನ್ನು ದಿನಾಂಕ: 25-07-2022 ರಂದು ಒಪ್ಪಿಸಿರುವುದು ತಿಳಿದು ಬಂದಿರುತ್ತದೆ. ಎಂಬ ವಿಷಯವನ್ನು ತಮ್ಮ ಆದ್ಯ ಗಮನಕ್ಕಾಗಿ ಗೌರವಗಳೊಂದಿಗೆ ಒಪ್ಪಿಸಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹಳಿಯಾಳ ವಿಭಾಗ, ಹಳಿಯಾಳ.